ಅಸಲು ದಾವಾ ನಂ.112/2023
ಪಿ ಡಬ್ಲ್ಯು -3

ದಿನಾಂಕಃ 26-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ . ಕೆ ಸಿ ಪಿ ವಕೀಲರಿಂದ .**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

**ಪಾಟೀಸವಾಲುಃ- ಪ್ರತಿವಾದಿ ನಂ.1 ರಿಂದ 3 ಪರ ಶ್ರೀ.ಎಮ್ ಎಸ್ ಎಮ್ ವಕೀಲರಿಂದ.**

ಕಮಲವ್ವ ಇವರಿಗೆ ಒಟ್ಟು ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಇರುತ್ತಾರೆ. ಒಬ್ಬನ ಹೆಸರು ದ್ಯಾಮಣ್ಣ ಎಂದು ಗೊತ್ತಿರುತ್ತದೆ. ಉಳಿದ ಮಕ್ಕಳ ಹೆಸರು ನನಗೆ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿ. ವಾದಿಯು ಈ ದಾವೆಯನ್ನು ಏನು ಪರಿಹಾರ ಬೇಡಿ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ಪ್ರತಿವಾದಿ ನಂ.2 ಮತ್ತು 3 ಯಾರು, ಏನು ಸಂಬಂಧ ಎಂದು ಗೊತ್ತಿಲ್ಲ. ವಡ್ಡರ ಓಣಿಯ ಮನೆಗಳು ಕೊಳಚೆ ನಿರ್ಮೂಲನಾ ಮಂಡಳಿಯವರು ಜನರಿಗೆ ನೀಡಿದ ಮನೆಗಳು ಎಂದರೆ ಸರಿ. ಪ್ರತಿವಾದಿ ನಂ.2 ಮತ್ತು 3 ಇವರಿಗೆ ಮಂಡಳಿಯವರು ಮನೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಮಂಡಳಿಯವರು ಎಷ್ಟು ಜನರಿಗೆ ಹಕ್ಕು ಪತ್ರ ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ನನಗೆ ವಾದಿಯು ಸಾಕ್ಷ ನುಡಿಯಲು ಹೇಳಿದ್ದರಿಂದ ಅವರ ಪರವಾಗಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಭೀಮಣ್ಣ ಮತ್ತು ದುರ್ಗವ್ವ ಇವರಿಗೆ 1 ನೇ ಪ್ರತಿವಾದಿ ಮಾತ್ರ ಮಗಳು ಎಂದರೆ ಸರಿಯಲ್ಲ. ಅವರಿಗೆ 3 ಜನ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-13 ಪೋಟೋದಲ್ಲಿ ನಾನು ಇಲ್ಲ. ನಿಪಿ-13 ರಲ್ಲಿ ಟೊಪ್ಪಿಗೆ

ಹಾಕಿರುವ ವ್ಯಕ್ತಿ ದ್ಯಾಮಣ್ಣ ಇರುತ್ತಾರೆ. ದ್ಯಾಮಣ್ಣನ ಪಕ್ಕದಲ್ಲಿ ನಿಂತಿರುವವರು ಅವರ ಮಗ ಇರುತ್ತಾರೆ. ದ್ಯಾಮಣ್ಣ ಕಮಲವ್ವಳ ಮಗ ಇರುತ್ತಾರೆ. ನಿಪಿ–13 ಪೋಟೋದಲ್ಲಿರುವ ದ್ಯಾಮಣ್ಣ ಎಷ್ಟು ವಯಸ್ಸಿನವರು ಎಂದು ಹೇಳಲು ಬರುವುದಿಲ್ಲ. ಭೀಮಣ್ಣ ತೀರಿಕೊಂಡು 30 ವರ್ಷಕ್ಕಿಂತಲೂ ಹೆಚ್ಚಿಗೆ ಆಯಿತು. ಭೀಮಣ್ಣ ತೀರಿಕೊಂಡಾಗ ದ್ಯಾಮಣ್ಣ ಇವರಿಗೆ 8 ರಿಂದ 10 ವರ್ಷ ವಯಸ್ಸು ಆಗಿತ್ತು. ಹಾಗೇ ಭೀಮಣ್ಣನ ಮಗ ದ್ಯಾಮಣ್ಣ ನಿಪಿ–13 ರಲ್ಲಿ ಇರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ವಸ್ತುಸ್ಥಿತಿಯ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).